†ಶ್ರೀ ಧರ್ಮಸಿಂಗ್.—ಈಗಾಗಲೇ, ಆ ರೀತಿಯಾಗಿ ಅವರು ರೆಸಲ್ಯೂಷನ್ ಪಾಸ್‌ಮಾಡಿ ಕಳಿಸಿದ್ದಾರೆ, ಅದು ಡೆಪ್ಯುಟಿ ಕಮಿಷನರ್‌ರವರ ಪರಿಶೀಲನೆಯಲ್ಲಿದೆ. ಸರ್ಕಾರಕ್ಕೆ ಇನ್ನೂ ತಲುಪಿಲ್ಲ, ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಬಿ. ಗಂಗಾಧರಪ್ಪ.—ಆಸ್ಪತ್ರೆ ಕೊಟ್ಟಿರುವ ಉದ್ದೇಶ ಸ್ಲಂ ಏರಿಯಾನಲ್ಲಿರತಕ್ಕ ಬಡವರಿಗೆ ಅನುಕೂಲವಾಗಬೇಕು ಎಂದು. ಮುನಿಸಿಪಾಲಿಟಿಯವರು ಔಷಧಿ ಸಪ್ಲೈ ಮಾಡುತ್ತಾ ಇಲ್ಲ, ಅವರಲ್ಲಿರತಕ್ಕ ಸ್ವಾಫ್‌ಗೆ ಸಂಬಳಕೊಡುತ್ತಾ ಇಲ್ಲ, ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—೧೯೭೯ರಲ್ಲಿ ಈ ಆಸ್ಪತ್ರೆಯನ್ನು ಮುನಿಸಿಪಾಲಿಟಿಯವರ ಪ್ರಾರ್ಥನೆ ಮೇರೆಗೆ ಸ್ಯಾಂಕ್ಷನ್ ಮಾಡಿದ್ದು. ಈಗಾಗಲೇ ೭೫ ಪರ್ಸೆಂಟ್ ಖರ್ಚುಮಾಡುವುದು ಎಂದು ತೀರ್ಮಾನ ಕೈಗೊಂಡಿದೆ. ೨೫ ಸಾವಿರ ಖರ್ಚುಮಾಡಿದ್ದಾರೆ. ಆಕ್ಟ್ಯುಯ್‌ಗೆ ಕಾಂಪನ್‌ಸೇಷನ್ ಕೊಡುತ್ತಾ ಇದ್ದೇವೆ. ಈಗಾಗಲೇ ೫೦ ಸಾವಿರ ಖರ್ಚು ಮಾಡಿ ಎಂದು ಆರಂಭದಲ್ಲಿ ಮುನಿಸಿಪಾಲಿಟಿಯವರಿಗೆ ಆದೇಶ ಕೊಟ್ಟಿದ್ದೇವೆ. ಅವರು ಯೂಟಿಲೈಸ್ ಮಾಡಿಲ್ಲ. ಅದು ಎಲಿಕ್ವೆಡ್‌ಬಾಡಿ ಇದೆ, ಶಾಸಕರೂ ಇದ್ದಾರೆ. ಆದೇಶ ಕೊಟ್ಟಿದ್ದೇನೆ.

ಶ್ರೀ ವಿ. ಬಿ. ಗಂಗಾಧರಪ್ಪ.—ತಾವು ಡೆವಲಪ್‌ಮೆಂಟಿಗೆ ಕೊಟ್ಟಿದ್ದೀರಿ. ಆಸ್ಪತ್ರೆಗೆ ಅಲ್ಲ, ಸ್ಲಂ ಇಂಪ್ರೂವ್‌ಮೆಂಟ್‌ಗೋಸ್ಕರ, ರೋಡು, ರಸ್ತೆಮಾಡಬೇಕು ಎನ್ನುತಕ್ಕ ಉದ್ದೇಶದಿಂದ ಕೊಟ್ಟಿದ್ದೀರಿ, ಸ್ಲಂ ಇಂಪ್ರೂವ್‌ಮೆಂಟ್ ಬೋರ್ಡ್‌ಗೆ ಪರ್ಮಿಷನ್ ಕೊಟ್ಟಿಲ್ಲ ಆದುದರಿಂದ ಅವರು ಮಾಡಿಲ್ಲ ಆಸ್ಪತ್ರೆಗೆ ಬೇಕಾದ ಔಷಧಿ ವಗೈರೆಗಳನ್ನು ಸಪ್ಲೈ ಮಾಡುತ್ತಾ ಇಲ್ಲ. ಆದುದರಿಂದ ಸರ್ಕಾರ ಈ ಆಸ್ಪತ್ರೆಯನ್ನು ಮಹಿಸಿಕೊಂಡು ಬಡವರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—ನಗರಸಭೆಯವರ ಪ್ರಾರ್ಥನೆ ಮೇರೆಗೆ ಸ್ಯಾಂಕ್ಷನ್ ಮಾಡಿದ್ದು, ಈ ಆಗಂತಾ ಇಲ್ಲ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಡೆಪ್ಯುಟಿ ಕಮಿಷನರಿಗೆ ರೆಸಲ್ಯೂಷನ್ ಪಾಸ್ ಮಾಡಿ ಕಳುಹಿಸಿದ್ದಾರೆ. ಸರ್ಕಾರಕ್ಕೆ ಬಂದನಂತರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ.—ಇತ್ತೀಚೆಗೆ ಮಾನ್ಯ ಆರ್ಥಿಕ ಸಚಿವರು ಅರಸೀಕೆರೆಗೆ ಭೇಟಿ ಕೊಟ್ಟಿರ್ತ ಈ ಆಸ್ಪತ್ರೆಯನ್ನ್ನು ತೆಗೆದುಕೊಳ್ಳಲಿಕ್ಕೆ ಎಲ್ಲಾ ಪ್ರಯತ್ನವನ್ನೂ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು, ಆ ಭರವಸೆಯನ್ನು ಮುಂದುವರಿಸಿ ಅದರಂತೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಈಗಾಗಲೇ ಹೇಳಿದ್ದೇನೆ. ಮುನಿಸಿಪಾಲಿಟಿಯವರು ರೆಸಲ್ಯೂಷನ್ ಪಾಸ್ ಮಾಡಿದ್ದಾರೆ. ಡೆಪ್ಯುಟಿ ಕಮಿಷನರಿಂದ ಸರ್ಕಾರಕ್ಕೆ ಬಂದನಂತರ ಕ್ರಮ ತೆಗೆದುಕೊಳ್ಳುತ್ತೇನೆ.

Purchase of Furniture for T.D.B. Bangalore South Taluk

121 SEI B. V. RAMACHANDRA REDDY.-(Varthur)-Will the Minister for Rural Development and Panchayat Raj be pleased to state.--

(a) the amount of furniture purchased by the T.D.B. Bangalore South Taluk for its new Office Building when was the furniture supplied and to whom orders were placed.

(b) when was the estimate prepared, the Officer was scrutinised and which authority gave administrative and technical sanction and when ;

(c) the action Government taken against the concerned this the officials including the President who finalised deal ?

SRI B.RAMAIAH. (Minister for Rural Development and Panchayat Raj)—

(a) Furniture worth Rs. 56,956 was purchased in September 1979 from Messrs. Maruthi Glass and Plywood No. 105/1 Lakshmipuram, Main Road, Ulsoor, Bangalore.

(b) The requirement of furniture for the office was assessed and quotations were called on 27-7-1979 and the lowest quotation offered by the above firm was accepted. The TDB, Bangalore South in its meeting held on 25-7-1979 approved for purchasing the furniture worth Rs. 50,000 provided in the Budget of 1979-80. The Chief Executive Officer purchased furniture with the concurrence of the President pending administrative approval of the competent authority; The Divisional Commissioner, Bangalore accorded post-facto sanction for Rs. 43,020 only.

(c) The matter is being examined by the Divisional Commissioner, Bangalore, whether any irregularities have been committed or not.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಅಧ್ಯಕ್ಷರೇ, ನನ್ನ ಪ್ರಶ್ನೆ (ಅ)ಗೆ ಸರಿಯಾಗಿ ಉತ್ತರ ನೀಡಿಲ್ಲ. ಯಾವಾಗ ಅಂದಾಜನ್ನು ತಯಾರಿಸಿದ್ದರು ? ಯಾವ ಆಧಾರದ ಮೇಲೆ ಮಂಜೂರಾತಿ ನೀಡಲಾಗಿತ್ತು ಎನ್ನುವ ವಿವರಣೆಯನ್ನೆಲ್ಲಾ ತಿಳಿಸುತ್ತೀರಾ?

†ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೇ, ಉತ್ತರದಲ್ಲಿಯೇ ಸ್ಪಷ್ಟವಾಗಿ ತಿಳಿಸಿದ್ದೇನೆ, ಇದರಲ್ಲಿ ಅವ್ಯವಹಾರ ನಡೆದಿದೆ, ಅಕ್ರಮ ನಡೆದಿದೆ ಎನ್ನುವುದನ್ನು ಒಪ್ಪಿಕೊಂಡೇ ಬೆಂಗಳೂರಿನ ವಿಭಾಗಾಧಿಕಾರಿಗಳವರಿಗೆ ಸಂಬಂಧಪಟ್ಟವರು ತಕ್ಷಣವೇ ಶಿಕ್ಷೆಗೆ ಒಳಗಾಗಬೇಕು ಮತ್ತು ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ನನ್ನ ಪ್ರಶ್ನೆ ಏನೆಂದರೆ ಅಂದಾಜನ್ನು ಸಿದ್ಧಪಡಿಸಿದ್ದು ಯಾವ ದರದ ಮೇಲೆ, ಅದಕ್ಕೆ ತಾಂತ್ರಿಕ ಅನುಮೋದನೆ ನೀಡಲಾಗಿತ್ತೇ ?

ಶ್ರೀ ಬಿ. ರಾಮಯ್ಯ.—ಬೆಂಗಳೂರು ದಕ್ಷಿಣ ತಾಲ್ಲೂಕ್ ಅಭಿವೃದ್ಧಿ ಮಂಡಳಿಯವರು ಟೆಂಡರ್ ಕಾಲ್‌ಫಾರ್ ಮಾಡಿದಾಗ ಈ ಕಂಪನಿಯವರು ಮುಂದೆ ಬಂದಾಗ ಡಿವಿಜನಲ್ ಕಮಿಷನರ್‌ರವರು ಖರೀದಿ ಮಾಡಿದ್ದಾರೆ. ಈಗ ಪುನಃ ಅದರಲ್ಲಿ ಅಕ್ರಮ ವ್ಯವಹಾರ ನಡೆದಿದೆ ಎನ್ನುವುದು ಕಂಡು ಬಂದ ಕೂಡಲೇ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳಿ ಎಂದು ವಿಭಾಗಾಧಿಕಾರಿಗಳವರಿಗೆ ಆದೇಶ ನೀಡಿದ್ದೇನೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಅಧ್ಯಕ್ಷರೇ ಈ ವಿಷಯದ ಬಗ್ಗೆ ಹೇಳಬೇಕೆಂದರೆ ಅವರು ಯಾವುದೇ ತಾಂತ್ರಿಕ ಸಲಹೆಯನ್ನು ಪಡೆಯದೇ ಈ ಸಾಮಾನುಗಳನ್ನು ಕೊಂಡು ಕೊಂಡಿದ್ದಾರೆ. ಅದಕ್ಕೆ ಯಾವ ಎಸ್ಟಿಮೇಟ್ ತಯಾರಾಗಿರಲಿಲ್ಲ. ಮತ್ತೆ ಎರಡು ವರ್ಷಗಳಾದ ಮೇಲೆ ಸಾಮಾನುಗಳನ್ನು ಕೊಂಡು ಕೊಂಡಿದ್ದಾರೆ. ಇದನ್ನು ಈಗ ಸರ್ಕಾರದವರು ಪರೀಶಿಲನೆ ಮಾಡುವುದಾಗಿ ತಿಳಿಸುತ್ತಿದ್ದಾರೆ,

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೇ. ನಾನು ಆಗಲೇ ತಿಳಿಸಿದ್ದೇನೆ. ಈ ವಿಚಾರ ಬಂದ ಕೂಡಲೇ ವಿಭಾಗಾಧಿಕಾರಿಗಳು ತನಿಖೆ ಮಾಡಿ ವರದಿ ಕಳುಹಿಸುವಂತೆ ತಿಳಿಸಿದ್ದೇವೆ ಅವರಿಂದ ವರದಿ ಬಂದ ಕೂಡಲೇ ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ವಿಜ್. ವಿಲ್. ತಿಮ್ಮೇಗೌಡ —ಬೆಂಗಳೂರು ದಕ್ಷಿಣ ತಾಲ್ಲೂಕ್ ಅಭಿವೃದ್ಧಿ ಮಂಡಳಿಯವರು ೫೦.೦೦೦ ರೂ.ಗಳು ಬೆಲೆ ಬಾಳುವ ಪೀಠೋಪಕರಣಗಳನ್ನು ಕೊಂಡುಕೊಳ್ಳುವ ಬಗ್ಗೆ ನಿರ್ಣಯ ಮಾಡಿದ್ದರೆ. ೫೬.೫೫೬ ರೂ.ಗಳಷ್ಟು ಹಣದ ವಸ್ತುಗಳನ್ನು ಕೊಂಡುಕೊಳ್ಳಲಾಗಿದೆ. ಇದರ ಬಗ್ಗೆ ತಾವು ಏನು ಕ್ರಮವನ್ನು ಕೈಗೊಳ್ಳುತ್ತೀರಿ?

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೇ, ನಾನು ಆಗಲೇ ಹೇಳಿದ ಹಾಗೆ ಇದರ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ ವರದಿಯನ್ನು ಕಳುಹಿಸಿ ಕೊಡುವ ಬಗ್ಗೆ ಡಿವಿಜನಲ್ ಕಮಿಷನರ್‌ರವರಿಗೆ ತಿಳಿಸಿದ್ದೇವೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—೫೬ ಸಾವಿರ ರೂಪಾಯಿಗಳಲ್ಲಿ ಈಗಾಗಲೇ ೪೩ ಸಾವಿರ ರೂಪಾಯಿಗಳನ್ನು ಬಟವಾಡೆ ಮಾಡಲಾಗಿದೆ ಇನ್ನು ಉಳಿದ ೧೩ ಸಾವಿರ ರೂಗಳನ್ನು ತನಿಖೆ ಮುಗಿದ ನಂತರ ಬಟವಾಡೆ ಮಾಡುವ ಬಗ್ಗೆ ನಿರ್ದೇಶನವನ್ನು ಕೊಡುತ್ತೀರಾ ?

ಶ್ರೀ ಬಿ. ರಾಮಯ್ಯ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. ೧೬೯ ಶ್ರೀ ಐ.ಪಿ.ಡಿ. ಸಾಲಪ್ಪ ಮೆಂಬರು ಗೈರು ಹಾಜರಿ.

Functioning of Khadaklat T.P.C. in Chikodi Taluk,

282 SRI B. B. SAYANAK (Belgaum).—Will the Minister for Rural Development and Panchayath Raj be pleased to state.—

(a) whether the Khadaklat TPC in Chikodi Taluk in Belgaum District is not functioning for the last one year ;

(b) if so, the reasons for the same ;

(c) the reasons why Government has not superseded that TPC so far, whether it is a fact that the Secretary of that Panchayat Committee is transferred in the month of October 1980 ;

(d) the reasons for his transfer ?

SRI B. RAMAIAH (Minister for Rural Development and Panchayat Raj).—

(a) Yes.

(b) (1) 10 out of 19 Members of the Town Panchayat have tendered resignation for the membership. out of which 2 resignations have been accepted and the others 8 are still pending as the Secretary failed to follow the proper procedure in respect of them.

(2) The Secretary failed to convene meetings periodically in spite of instructions of the Chairman and is reported to have failed to co-operative with the Chairman and members of the Town Panchayat in securing its proper functioning.